# ಪ್ರಭಾತ

ಸಂಪುಟ: ೨೭. ಸಂಚಿಕೆ: ೪೭. 31-12-1961 Vol. XXVII. No. 47.


## ರಾಜಾಜಿ ಮತ್ತು ಗೋವೆ

ಭಾರತದ ಹಿರಿಯ ರಾಜಕಾರಣಿ ಶ್ರೀ| ರಾಜಗೋಪಾಲಾಚಾರಿಯವರು ಕಾಂಗ್ರೆಸ್ ಪ್ರಭುಗಳು ಅನುಸರಿಸುವ ನೀತಿಯ ಉಗ್ರಟೀಕಾಕಾರರಾಗಿ, ಕೆಲವು ಸುಧಾರಣೆಗಳನ್ನು, ಮುಖ್ಯವಾಗಿ ಸಹಕಾರಪದ್ಧತಿಯ ಬೇಸಾಯವನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸುವುದನ್ನು ಬಹ್ವಂಶ ಜನತೆ ಮೆಚ್ಚಬಹುದು; ರಾಜಾಜಿಯವರೊಂದಿಗೆ ಏಕಾಭಿಪ್ರಾಯ ತಾಳಬಹುದು. ಆದರೆ, ಗೋವಾ ವಿಮೋಚನೆಗೆ ನಮ್ಮ ಸರಕಾರವು ಕೈಕೊಂಡ ಸೈನಿಕ ಕಾರ್ಯಾಚರಣೆಯನ್ನೂ ವಿಷಯವನ್ನೂ ಅವರು, ಕಾಂಗ್ರೆಸ್ಸನ್ನು ಪದೆಬಡಿವ ಒಂದು ಸಾಧನವನ್ನಾಗಿ ಉಪಯೋಗಿಸಿಕೊಂಡುದು-- ರಾಜಾಜಿಯವರ ಮೇಲೆ ಜನತೆಗಿರುವ ಗೌರವಭಾವವನ್ನೂ ತಗ್ಗಿಸುವಂಥದ್ದಿದೆ. ಬಲಪ್ರಯೋಗದಿಂದ ಭಾರತವು, ನೈತಿಕ ಪ್ರಪಂಚದಲ್ಲಿ ತನ್ನ ವರ್ಚಸ್ಸು ಕಳಕೊಂಡಿತೆಂದೂ, ಇದು ಭಾರತದ ಮಹಾನಷ್ಟವೆಂದೂ, ಅಡ್ಲೈ ಸ್ಟೀವನ್ಸನ್ನರ ಕಂಠವು ಅಮೆರಿಕದ ಕಂಠವೆಂದೂ ಹೇಳುತ್ತ ರಾಜಾಜಿಯವರು; ಕೆಟ್ಟುದನ್ನು ಕೆಟ್ಟುದರಿಂದಲೇ ಕೊನೆಗೊಳಿಸುವುದನ್ನು ಗಾಂಧಿಜಿಯವರು ಅಪೇಕ್ಷಿಸಿರಲಿಲ್ಲವೆಂದೂ ವಾದಿಸಿದ್ದಾರೆ. ಆದರೆ, ಭಾರತವೆಂಬ ಬೃಹತ್ ದೇಹದ ಮೇಲಿದ್ದ ವ್ರಣವು ಬಹುಕಾಲದಿಂದ ತನ್ನಿಂತಾನೆ ಗುಣಹೊಂದದೆ, ಸೌಮ್ಯರೀತಿಯಿಂದಲೂ ಚಿಕಿತ್ಸಿಸಲ್ಪಡಲಾರದೆ ಕೊಳೆತೇ ಹೋಗುವುದನ್ನೂ ಅಡ್ಲೈ ಸ್ಟೀವನ್ಸನ್ನರಂಥವರು ಕೆಟ್ಟ ಈ ಸ್ಥಿತಿಯನ್ನು ಇನ್ನೂ ಕೆಡುವಂತೆ ಅಲಕ್ಷಿಸಿದ್ದನ್ನೂ, ರಾಜಾಜಿಯವರು ತರ್ಕಿಸಿಲ್ಲವೆಂಬುದು ವಿಚಿತ್ರ. ಹೈದರಾಬಾದದೊಳಗೆ ಭಾರತದ ಸೇನೆ ಪ್ರವೇಶಿಸಿದಾಗ ರಾಜಾಜಿಯವರು ಇಂದಿನಷ್ಟು ಉಗ್ರಟೀಕಾಕಾರರಾಗಿರಲಿಲ್ಲ. ನೈತಿಕವಾಗಿ, ಭೌಗೋಲಿಕವಾಗಿ—ಎಲ್ಲ ದೃಷ್ಟಿಗಳಿಂದ ನಮ್ಮದಾಗಿದ್ದ ಭೂಮಿಯನ್ನು ನಾವು, ಹಲವು ವರ್ಷಗಳ ತಾಳ್ಮೆಯ ನಂತರ, ಸೇನೆಗಳನ್ನು ಕಳಿಸಿ ವಶಪಡಿಸಿಕೊಂಡುದನ್ನು ಆಕ್ಷೇಪಿಸುವವರು ಅಸ್ಯದಲ್ಲಿದ್ದರೆ— ಈಗ ರಾಜಾಜಿಯವರೊಬ್ಬರೇ ಎನ್ನಬೇಕಾಗುತ್ತದೆ; ಅವರ ಸ್ವತಂತ್ರಪಕ್ಷೀಯರು ಕೂಡ, ಈ ಒಂದು ವಿಷಯದಲ್ಲ ಅವರೊಡನೆ ಒಪ್ಪಲಾರರು. ಪಕ್ಷ-ಪಕ್ಷಗಳೊಡನೆ ಅಭಿಪ್ರಾಯ ಭೇದವಿರುವುದು ಸಹಜ; ಆದರೆ, ತನಗೊಲ್ಲದ ಪಕ್ಷದ ಸರಕಾರವು ಸರ್ವಜನಹಿತಕ್ಕಾಗಿ ಸರ್ವಾನುಮತಿಯ ಒಂದು ಸತ್ಕಾರ್ಯವೆಸಗಿದುದನ್ನೂ ಬಣ್ಣದ ಕನ್ನಡಕದೊಳಗಿಂದ ನೋಡುವುದನ್ನು ದ್ವೇಷದಿಂದ ದೂಷಿತವಾಗಿರುವ ದೃಷ್ಟಿಯೆನ್ನಬೇಕಾಗುತ್ತದೆ. ರಾಜಾಜಿಯವರು ಈ ಗೋವಾ ವಿಷಯವನ್ನೆತ್ತಿ, ತಮ್ಮ ಪಕ್ಷಕ್ಕೇ ಹಾನಿ ತಂದುಕೊಂಡಿದ್ದಾರೆ. ಭಾರತ ಸರಕಾರವು, ಅಹಿಂಸೆಯ ಲವಲೇಶವನ್ನೂ ತಿಳಿದಿರದಂಥ ಪಾಶ್ಚಿಮಾತ್ಯ ರಾಷ್ಟ್ರಗಳ ಮೇಲೆ ತನಗಿದ್ದ ವರ್ಚಸ್ಸನ್ನು ತಾತ್ಕಾಲಿಕವಾಗಿ ಕಳಕೊಂಡಿದರೂ, ಭಾರತದಲ್ಲೂ ಸಮಗ್ರಆಸ್ಯದಲ್ಲೂ ವರ್ಚಸ್ಸನ್ನು ಹೆಚ್ಚಿಸಿಕೊಂಡಿದೆ. ಜಗತ್ತಿನಲ್ಲಿ ವಸಾಹತವಾದವನ್ನು ಕೊನೆಗೊಳಿಸಲು ಮುಂದಾಳ್ತನವನ್ನೂ ತೋರಿದೆ. ರಾಜಾಜಿಯವರು ಭಾರತದೊಳಗಿನ ತನ್ನ ವರ್ಚಸ್ಸನ್ನು ಈ ಗೋವಾ ಪ್ರಕರಣವನ್ನು ಅನಾವಶ್ಯಕವಾಗಿ ಕದಡಿ, ಕಳಕೊಂಡಿದ್ದಾರೆ ವಿದೇಶಗಳಲ್ಲೂ ಕಳಕೊಳ್ಳುವುದರಲ್ಲಿ ಅನುಮಾನವಿಲ್ಲ.

——

## ಶ್ರೀಮತಿ ಸೋನುಬಾಯಿಯವರ ಸಂಗೀತಕಚೇರಿ

ಮಂಗಳೂರಿನ ವಜ್ರವ್ಯಾಪಾರಿಗಳಲ್ಲೊಬ್ಬರಾಗಿರುವ ಶ್ರೀ| ಎಸ್. ಎಲ್. ಶೇಟ್‍ರವರು ತೀರ್ಥಯಾತ್ರೆ ಮಾಡಿ ಮರಳಿ, ಕಳೆದವಾರ, ಪೆಂಟ್ಲೆಂಡ್ ಪೇಟೆಯ ತಮ್ಮ ನಿವಾಸದಲ್ಲಿ ಹರಿಸೇವೆ ನಡೆಸಿದ ಸಂದರ್ಭದಲ್ಲಿ, ಹಾವೇರಿಯ ರೇಡಿಯೋ ಗಾಯಕಿ ಶ್ರೀಮತಿ ಸೋನುಬಾಯಿಯವರ ಒಂದು ಸಂಗೀತ ಕಚೇರಿಯನ್ನು ಅದೇ ದಿನ ಸಾಯಂಕಾಲ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಏರ್ಪಡಿಸಿದ್ದರು. ಶ್ರೀಮತಿಯವರಿಗೆ ಒಂದು ಥೈಲಿಯನ್ನು ಶ್ರೀ| ಎಸ್. ಎಲ್. ಶೇಟರ ಪರವಾಗಿ ಅರ್ಪಿಸಲಾಯಿತು. ಶ್ರೀ| ಪಿ. ಕೆ. ನಾರಾಯಣ, ವಿದ್ವಾನ್, ಅವರು ಈ ಸಂದರ್ಭದಲ್ಲಿ, ಶ್ರೀಮತಿಯವರ ಸಂಗೀತ ಕಲಾಸೇವೆಯ ಕುರಿತು ನಾಲ್ಕು ಮಾತುಗಳನ್ನಾಡಿದರು.

### ಧರ್ಮಸ್ಥಳದಲ್ಲಿ

ಶ್ರೀಮತಿ ಸೋನುಬಾಯಿಯವರ ಇನ್ನೊಂದು ಸಂಗೀತಕಚೇರಿಯು ಧರ್ಮಸ್ಥಳದಲ್ಲಿ ತಾ. 25ನೇ ಸೋಮವಾರ ಸಾಯಂಕಾಲ, ಧರ್ಮಾಧಿಕಾರಿಗಳಾಗಿರುವ ಶ್ರೀ| ಡಿ. ರತ್ನವರ್ಮ ಹೆಗ್ಗಡೆಯವರ ಸಮಕ್ಷಮ, ಬೀಡಿನಲ್ಲಿ ನಡೆಯಿತು. ಶ್ರೀ| ಹೆಗ್ಗಡೆಯವರು ಸೋನುಬಾಯಿಯವರಿಗೆ ತಕ್ಕ ಪುರಸ್ಕಾರವಿತ್ತು, ಹರಸಿದರು.

——

## ಸ್ವಾಮೀಜೀ ಸೆಕೆಂಡರಿ ಶಾಲೆ,

### ಎಡನೀರು

ಎಡನೀರಿನ ಸ್ವಾಮೀಜೀ ಸೆಕೆಂಡರಿ ಶಾಲಾ ವರ್ಧಂತ್ಯುತ್ಸವವು ತಾ. 5-1-61 ನೇ ಶುಕ್ರವಾರ ಸಾಯಂಕಾಲ ಘಂಟೆ 5ಕ್ಕೆ, ಉಡುಪಿಯ ಶ್ರೀ ಫಲಿಮಾರು ಮಠಾಧೀಶರಾದ ಶ್ರೀಮತ್ ರಘುವಲ್ಲಭ ತೀರ್ಥ ಶ್ರೀಪಾದಂಗಳವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗುವುದು. ಶ್ರೀ ಎಡನೀರು ಮಠಾಧೀಶರಾದ ಶ್ರೀ ಕೇಶವಾನಂದ ಭಾರತೀ ಶ್ರೀಪಾದಂಗಳವರು ಬಹುಮಾನವಿತರಣೆಮಾಡುವರು.

——

## ಮೊಗವೀರ ಹಾ| ಎ| ಶಾಲೆ,

### ಉಳ್ಳಾಲ

ಮೇಲಿನ ಶಾಲೆಯ ವರ್ಧಂತ್ಯುತ್ಸವವು ಶ್ರೀ| ಧರ್ಮಸ್ಥಳ ರತ್ನವರ್ಮ ಹೆಗ್ಗಡೆ, M.L.A., ಇವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ| ಶ್ರೀ| ಯನ್. ರಾಮಕೃಷ್ಣ ರೈ, ಕೋಟೆಕಾರು ಇವರು ಬಹುಮಾನ ವಿತರಣೆ ಹಾಗು ಶ್ರೀ ರಾಜೀವ ಭಂಡಾರಿ ಮತ್ತು ಯು. ಸದಾನಂದ ಕಿಣಿ ಇವರ ಭಾವಚಿತ್ರ ಅನಾವರಣ ನೆರವೇರಿಸಿದರು. ಶ್ರೀ| ಹೆಗ್ಗಡೆಯವರು, ಶಾಲೆಯ ಅಭಿವೃದ್ಧಿಗಾಗಿ ಸಂತೋಷ ವ್ಯಕ್ತಪಡಿಸಿ, ಹರಸಿದರು.

——

## ದಿ| ಎ. ಬಿ. ಶೆಟ್ಟಿಯವರ ಶಿಲಾಪ್ರತಿಮೆಯ ಅನಾವರಣ

ದಿವಂಗತ ಅತ್ತಾವರ ಬಾಲಕೃಷ್ಣ ಶೆಟ್ಟಿಯವರ ಚಂದ್ರಕಾಂತ ಶಿಲಾಪ್ರತಿಮೆಯ ಅನಾವರಣ ಸಮಾರಂಭವು, ಮದರಾಸು ವಿಶ್ವವಿದ್ಯಾಲಯದ ವೈಸ್ ಛಾನ್ಸಲರ್ ಶ್ರೀ| ಎ. ಲಕ್ಷ್ಮಣಸ್ವಾಮಿ ಮುದಲಿಯಾರ್‍ರವರಿಂದ ತಾ. 6-1-61 ನೇ ಶನಿವಾರ, ಸಾಯಂಕಾಲ 5-45ಕ್ಕೆ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ನೆರವೇರುವುದು.

——

## ಶ್ರೀ ಶಾರದಾದೇವಿ ಜಯಂತಿ

ಮಂಗಳೂರು ಬೋಳಾರದಲ್ಲಿರುವ ಶ್ರೀ ರಾಮಕೃಷ್ಣಾಶ್ರಮದಲ್ಲಿ ವರ್ಷಂಪ್ರತಿ ನಡೆವಂತೆ ಶ್ರೀ ಶಾರದಾದೇವಿ, ಸ್ವಾಮಿ ವಿವೇಕಾನಂದ ಮತ್ತು ಭಗವಾನ್ ಶ್ರೀ ರಾಮಕೃಷ್ಣ ಇವರ ಜನ್ಮದಿನೋತ್ಸವಗಳ ಕಾರ್ಯಕ್ರಮವು, ಇದೇ ತಾ. 29-12-61ರಂದು ಆರಂಭವಾಗಿದ್ದು, ನಾಳೆಗೆ (ರವಿವಾರ) ಕೊನೆಗೊಳ್ಳುವುದು.

ಮೊದಲ ದಿನ ಶಾರದಾದೇವಿಯವರ ಜಯಂತಿಯಲ್ಲಿ, ಬೆಂಗಳೂರಿನ ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಶಾಸ್ತ್ರಾನಂದಜಿಯವರು ಅಧ್ಯಕ್ಷತೆ ವಹಿಸಿದ್ದರು. ಸ್ವಾಮೀಜಿಯವರು ತಮ್ಮ ಭಾಷಣದಲ್ಲಿ ಭಾವೈಕ್ಯ ವಿಚಾರವನ್ನೆತ್ತಿ, ಪ್ರೇಮ-ತ್ಯಾಗ-ಸಹನೆಗಳಿಂದಲೇ ಇದನ್ನು ಯತ್ನಿಸುವುದು ಅಪೇಕ್ಷಣೀಯವೆಂದರು. ಗವರ್ನಮೆಂಟ್ ಕೊಲೇಜಿನ ಪ್ರೊ| ಶ್ರೀಮತಿ ಎಂ. ರಾಜೀವಿ ಬಾಯಿಯವರೂ ಮೈಸೂರು ಮಹಾರಾಜಾರವರ ಕೊಲೇಜಿನ ಶ್ರೀ| ಯು. ಕೆ. ಸುಬ್ಬರಾಯರೂ ಶಾರದಾದೇವಿಯವರ ಜೀವನಾದರ್ಶಗಳ ಕುರಿತು ಭಾಷಣವಿತ್ತರು. ಆ ಮೇಲೆ ಸಂಗೀತ ವಿದುಷೀ ಎನ್. ಚೊಕ್ಕಮ್ಮ ಮತ್ತು ಪಾರ್ಟಿಯವರ ಸಂಗೀತ ಕಾರ್ಯಕ್ರಮ ನಡೆದು, ಸಮಾರಂಭವು ಕೊನೆಗೊಂಡಿತು.

——

## ವಿವಾಹ

ಮಂಗಳೂರಿನ ಶ್ರೀ| ಕುಡ್ವಿ ಬಾಲಕೃಷ್ಣ ಶೆಣೈಯವರ ಪುತ್ರಿ ಸೌ| ಮೀರಾ ಅವರನ್ನು ಶ್ರೀ| ಎಮ್. ಪಿ. ರಾವ್‍ರವರ ಪುತ್ರ ಶ್ರೀ| ಕಾಳಿದಾಸರಾವ್‍ರವರು, ತಾ. 20ರಂದು ಅಭಿಜಿನ್ ಮುಹೂರ್ತದಲ್ಲಿ, ರಥಬೀದಿಯಲ್ಲಿರುವ ವಧೂಗೃಹದಲ್ಲಿ ವಿವಾಹವಾದರು.

ಶ್ರೀ| ಪಿ. ರಮಾನಾಥ ನಾಯ್ಕರವರ ಪುತ್ರಿ ಸೌ| ಕಸ್ತೂರಿ ಅವರನ್ನು ಶ್ರೀ| ನಂದಳಿಕೆ ಪಾಂಡುರಂಗ ಕುಡ್ವರವರ ಪುತ್ರ ಶ್ರೀ| ವೇದವ್ಯಾಸ ಕುಡ್ವರವರು, ತಾ. 20ರಲ್ಲಿ, ಅಭಿಜಿನ್ ಮುಹೂರ್ತದಲ್ಲಿ ಮಹಾತ್ಮಾಗಾಂಧಿ ರಸ್ತೆಯಲ್ಲಿರುವ ಪಲ್ಕೆ ಕೃಷ್ಣಾಚಾರ್ ಸಭಾಭವನದಲ್ಲಿ ವಿವಾಹವಾದರು.

ಶ್ರೀ| ಕೆ. ರಾಮ ನಾಯ್ಕರವರ ಪುತ್ರಿ ಸೌ| ಕಸ್ತೂರಿ ಅವರನ್ನು, ಮಂಗಳೂರು ಶ್ರೀ| ಕೆ. ಪಿ. ವಾಸುದೇವರಾವ್‍ರವರ ಪುತ್ರ ಶ್ರೀ| ಕೆ. ಪಿ ಪುರುಷೋತ್ತಮರಾವ್‍ರವರು ತಾ. 27ರಂದು ಅಭಿಜಿನ್ ಮುಹೂರ್ತದಲ್ಲಿ, ಬಿಸೆಂಟ್ ರಾಷ್ಟ್ರೀಯ ಬಾಲಿಕಾ ಹೈಸ್ಕೂಲಿನ ಸಭಾಸದನದಲ್ಲಿ ವಿವಾಹವಾದರು.

ಶ್ರೀ| (ದಿ|) ಪಿ. ಲಕ್ಷ್ಮಣ ನಾಯ್ಕರವರ ಪುತ್ರಿ ಸೌ| ಕೃಷ್ಣಾಬಾಯಿ ಅವರನ್ನು ಶ್ರೀ| ಎನ್. ವಾಮನ ಮಲ್ಯರವರ ಪುತ್ರ ಶ್ರೀ| ಎನ್. ಮೋಹನ ಮಲ್ಯರವರು, ತಾ. 27ರಂದು ಅಭಿಜಿನ್ ಮುಹೂರ್ತದಲ್ಲಿ ವಿವಾಹವಾದರು.

ಹೊನ್ನಾವರ ಶ್ರೀ| ಪದ್ಮನಾಭಕೃಷ್ಣ ಪೊಕಳೆ ಅವರ ಪುತ್ರಿ ಸೌ| ಶಶಿಕಲಾ ಅವರನ್ನು, ಮಂಗಳೂರಿನ ಕುಲಶೇಖರ ನರಸಿಂಹ ಜಿ. ಶೇಟ್‍ರವರ ಪುತ್ರ ಶ್ರೀ| ಸುರೇಂದ್ರ ಶೇಟ್‍ರವರು ತಾ. 27ರಂದು ಹೊನ್ನಾವರ ಶ್ರೀ ಗಣಪತಿ ದೇವಸ್ಥಾನದಲ್ಲಿ ವಿವಾಹವಾದರು.

——

**ಬೊಂಬೈ ಮೇಯರರು ಮಂಗಳೂರಲ್ಲಿ:** ಮುಂಬಾಯಿಯ ಮೇಯರ ಶ್ರೀ| ವಿ. ಬಿ. ವರ್ಲಿಕರ್‍ರವರು ಮಂಗಳೂರಿಗೆ ಆಗಮಿಸಿದ್ದು, ಕಳೆದ ತಾ. 29ರಂದು ಬೆಳಿಗ್ಗೆ ಸ್ಥಳೀಯ ಮುನ್ಸಿಪಲ್ ಆಫೀಸಿಗೆ ಸಂದರ್ಶನವಿತ್ತಾಗ ಮಂಗಳೂರು ನಾಗರಿಕರ ಪರವಾಗಿ ನಗರಸಭಾಧ್ಯಕ್ಷ ಶ್ರೀ| ಮಣೇಲ ಶ್ರೀನಿವಾಸ ನಾಯ್ಕರು ಸ್ವಾಗತ ಬಯಸಿ, ಮಂಗಳೂರು ನಗರಸಭೆಯ ಕಾರ್ಯಕಲಾಪಗಳ ಸೂಕ್ಷ್ಮ ಪರಿಚಯ ಮಾಡಿಕೊಟ್ಟುದಲ್ಲದೆ, ಮಂಗಳೂರು ಬಡಾವಣೆಗೊಳ್ಳುತ್ತಿದ್ದು, ಬೇಗನೆ ಕೊರ್ಪೊರೇಶನಾಗಿ ಅದನ್ನು ಪರಿವರ್ತಿಸುವ ಸಿದ್ಧತೆ ನಡೆಯುತ್ತಿದೆಯೆಂದು ತಿಳಿಸಿದರು.

**ರೋಟರಿ ಕ್ಲಬ್ಬಿನ ಸಭೆ:** ಮಂಗಳೂರು ರೋಟರಿ ಕ್ಲಬ್ಬಿನ ಸಭೆಯೊಂದು ಕಳೆದ ತಾ. 28ರಂದು ಸಂಜೆ ಸ್ಥಳೀಯ ಸಿ. ಪಿ. ಸಿ. ಸಭಾಭವನದಲ್ಲಿ ಜರಗಿದಾಗ, ಸಭೆಗೆ ಉಪಸ್ಥಿತರಿದ್ದ ಮುಖ್ಯ ಅತಿಥಿ ಮುಂಬಾಯಿಯ ಮೇಯರ್ ಶ್ರೀ| ವಿ. ಬಿ. ವರ್ಲಿಕರ್‍ರು ಮುಂಬಾಯಿ ಕೊರ್ಪೊರೇಶನಿನ ಕಾರ್ಯಕಲಾಪಗಳ ಸ್ಥೂಲಪರಿಚಯಾತ್ಮಕ ಭಾಷಣಮಾಡಿದರು.

——

# ನಮ್ಮ ಕವಿಗಳು—ಪ್ರಥಮತಃ ಕನ್ನಡಿಗರು!

**"ಕನ್ನಡದ ಕಾವ್ಯಪುರುಷ ಒಂದೊಂದು ಕಾಲಕ್ಕೆ ಒಂದೊಂದು ರೂಪದಲ್ಲಿ ಮೈವೆತ್ತು ನಿಂತಿರುವನು.**

> ಗದಗದಲ್ಲಿ, ತಾ. 27—12—61ರಲ್ಲಿ ಸೇರಿದ ನಲ್ವತ್ತಮೂರನೆಯ ಕನ್ನಡ ಸಾಹಿತ್ಯ ಸಮ್ಮೇಲನದಲ್ಲಿ; ಪ್ರೊ: ಕೆ. ಜಿ. ಕುಂದಣಗಾರರ ಅಧ್ಯಕ್ಷಭಾಷಣ.

## ಅವರೆಲ್ಲ ಕನ್ನಡಿಗರು

"ಕನ್ನಡ ಸಾಹಿತ್ಯವನ್ನು ಜೈನ, ವೀರಶೈವ, ಬ್ರಾಹ್ಮಣ ಎಂದು ವಿಭಜಿಸುವುದು ಸೂಕ್ತವಲ್ಲವೆಂದು ಕೆಲವರ ಮತ. ನಮ್ಮ ಸಾಹಿತ್ಯಕ್ಕೆ ಜೈನ, ವೀರಶೈವ, ಬ್ರಾಹ್ಮಣ ಧರ್ಮಗಳು ಚೈತನ್ಯ ಕಳೆಯನ್ನಿತ್ತುದೂ ಅದರ ಪಂಚಪ್ರಾಣದಂತಿದ್ದುದೂ ಸೂರ್ಯನಷ್ಟು ಸ್ಪಷ್ಟವಾಗಿದೆ. ಜಾತ್ಯತೀತತೆಯ ನೆಪದಲ್ಲಿ ಐತಿಹಾಸಿಕ ಸತ್ಯವನ್ನು ಮರೆಮಾಡುವುದು ಸರಿಯಲ್ಲ. ಜೈನರೂ ವೀರಶೈವರೂ ಬ್ರಾಹ್ಮಣರೂ ಇತರರೂ ಎಲ್ಲರೂ ಕನ್ನಡಿಗರೇ. ಕನ್ನಡದ ಕಾವ್ಯಪುರುಷ ಒಂದೊಂದು ಕಾಲಕ್ಕೆ ಒಂದೊಂದು ರೂಪದಲ್ಲಿ ಮೈವೆತ್ತು ನಿಂತಿರುವನು. ಈ ದೃಷ್ಟಿಯಿಂದ ನೋಡಿದರೆ ಜೈನ ಕವಿ ಪಂಪ, ವೀರಶೈವ ಕವಿ ಹರಿಹರ, ಬ್ರಾಹ್ಮಣಕವಿ ಕುಮಾರವ್ಯಾಸ ಇವರೆಲ್ಲರೂ ಪ್ರಥಮತಃ ಕನ್ನಡಿಗರು. ಕನ್ನಡಿಗರ ಜೀವನವನ್ನೇ ಉದ್ಧರಿಸಲು ಉದಯಿಸಿದ ಪುಣ್ಯಪುರುಷರು-"

—ಎಂಬುದಾಗಿ, ಗದಗಿನಲ್ಲಿ, ನಲ್ವತ್ತಮೂರನೆಯ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷ ಸ್ಥಾನದಿಂದ ಭಾಷಣ ಮಾಡುತ್ತ, ಪ್ರೊ| ಕೆ. ಜಿ. ಕುಂದಣಗಾರ, ಎಂ. ಎ., ಅವರು ಹೇಳಿದರು.

"ಕನ್ನಡ ಸಾಹಿತ್ಯಗಂಗೆ ಕ್ರಿ. ಶ. ೫ನೆಯ ಶತಮಾನದಿಂದ ಇಂದಿನ ವರೆಗೆ ಅವ್ಯಾಹತವಾಗಿ ಹರಿದುಬಂದಿದೆ—" ಎನ್ನುತ್ತ ಶ್ರೀ| ಕುಂದಣಗಾರರು ೧೫೦೦ ವರ್ಷಗಳ ಈ ಸಾಹಿತ್ಯದ ನೆಲೆ-ಬೆಲೆಗಳನ್ನು ಸೂಚ್ಯವಾಗಿ ಹೇಳಿದರು. ಅವರ ಭಾಷಣದಿಂದ ಕೆಲವಂಶವನ್ನು ಆಯ್ದು ಇಲ್ಲಿ ಕೊಡುತ್ತಿದ್ದೇವೆ.

## ಎರಡು ಸಾವಿರ ವರ್ಷಗಳ ಇತಿಹಾಸ

ಕನ್ನಡವು ಭಾರತದ ಗಣ್ಯಭಾಷೆಗಳಲ್ಲಿ ಒಂದು. ಅದಕ್ಕೆ ಸುಮಾರು ಎರಡು ಸಾವಿರ ವರುಷಗಳ ಇತಿಹಾಸವಿದೆ. ಉಜ್ವಲವಾದ ಸಾಹಿತ್ಯ ಪರಂಪರೆ ಇದೆ; ಉನ್ನತವಾದ ಸಂಸ್ಕೃತಿ ಇದೆ.

ಕನ್ನಡ ನಾಡು—ನುಡಿಗಳ ಅಸ್ತಿತ್ವವನ್ನು ಎತ್ತಿ ಹೇಳುವ ಉಲ್ಲೇಖಗಳು ಕ್ರಿ. ಶ. ಪೂ. ಸು ೩ನೆಯ ಶತಮಾನದಿಂದ ಗೋಚರವಾಗುತ್ತವೆ. ಈ ನಾಡಿನ ಜನ ಒಂದು ಜನಾಂಗವಾಗಿ ಸುವ್ಯವಸ್ಥಿತವಾದ ಜೀವನವನ್ನು ಅಷ್ಟು ಪೂರ್ವದಲ್ಲಿಯೇ ಸಾಗಿಸುತ್ತಿದ್ದಿತೆಂಬ ವಿಷಯ ಅತ್ಯಂತ ಅಭಿಮಾನಾಸ್ಪದವಾದುದು. ಸಿದ್ದಾಪುರ, ಕೊಪ್ಪಳ, ಬನವಾಸಿ ಮುಂತಾದ ಕಡೆಗಳಲ್ಲಿ ದೊರೆತ ಮೌರ್ಯ ಚಕ್ರವರ್ತಿ ಅಶೋಕನ ಶಾಸನಗಳಿಂದ ಈ ನಾಡು ಆತನ ಧರ್ಮದೃಷ್ಟಿಗೂ ರಾಜ್ಯಕೀಯ ಪುಷ್ಟಿಗೂ ಒಳಗಾಗಿತ್ತೆಂದು ನಿರ್ದಿಷ್ಟವಾಗಿ ಹೇಳಬಹುದು. ಶಾತವಾಹನರ ಆಳ್ವಿಕೆಯಲ್ಲಿ ಈ ನಾಡಿನ ರಾಜಕೀಯ ಹಾಗೂ ಸಾಮಾಜಿಕ ವ್ಯವಸ್ಥೆ ಇನ್ನೂ ಹೆಚ್ಚು ಸುವ್ಯವಸ್ಥಿತವಾಗಿರಬೇಕೆಂದು ಚಿಪಳೂಟ ಘಟ್ಟ ಹಾಗೂ ನಾನಾ ಘಟ್ಟಗಳ ಗುಹೆಗಳಲ್ಲಿರುವ ಶಾಸನಗಳು ಸಾರಿ ಹೇಳುತ್ತಿವೆ.

ದಕ್ಷಿಣ ಕನ್ನಡದ ಧರ್ಮಗುಪ್ತ, ಬ್ರಹ್ಮಗುಪ್ತ ಎಂಬ ವರ್ತಕರು ಮುಂಬಾಪುರಿಯಲ್ಲಿ ವ್ಯಾಪಾರ ಮಾಡುವುದಕ್ಕೋಸ್ಕರ ನಿರ್ಮಿಸಿಕೊಂಡ ಬ್ಯಾಂಕಿನ ವ್ಯವಸ್ಥೆಯ ಉಲ್ಲೇಖ ಈ ಶಾಸನಗಳಲ್ಲಿ ವಿವರವಾಗಿ ಬಂದಿದೆ.

ಶಾತವಾಹನರ ನಂತರದ ಕರ್ನಾಟಕದ ಇತಿಹಾಸ ಹೆಚ್ಚು ಸ್ಪಷ್ಟವಾಗಿಯೂ ಉಜ್ವಲವಾಗಿಯೂ ಇದೆ. ಕದಂಬರು, ಗಂಗರು, ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ವಿಜಯನಗರದವರು ಕಟ್ಟಿದ ಸಾಮ್ರಾಜ್ಯಗಳು; ರಟ್ಟರು, ಶಿಲಾಹಾರರು, ಕೆಳದಿ, ಬೀಳಗಿ, ಇಕ್ಕೇರಿ, ಸ್ವಾದಿ, ಕಿತ್ತೂರು, ಮೈಸೂರು ಈ ರಾಜಮನೆತನಗಳು ಆಳಿದ ರಾಜ್ಯಗಳು ಕರ್ನಾಟಕದ ಇತಿಹಾಸದಲ್ಲಿ ದೇದೀಪ್ಯಮಾನವಾಗಿ ಬೆಳಗುತ್ತಲಿವೆ.

## ಜೈನರು

ಜೈನಧರ್ಮ ಕರ್ನಾಟಕಕ್ಕೆ ಹೊರಗಿನಿಂದ ಬಂದರೂ ಅದು ಮತಪ್ರಚಾರಕ್ಕೆ ಇಲ್ಲಿಯ ಮನೆಮಾತನ್ನೆತ್ತಿಕೊಂಡು, ಮಾತನಾಡುವ ಭಾಷೆಗೆ ಗ್ರಂಥಸ್ವರೂಪವನ್ನು ತಂದುಕೊಟ್ಟಿತು; ಕನ್ನಡ ಸಾಹಿತ್ಯದ ಉಗಮಕ್ಕೂ ವಿಕಾಸಕ್ಕೂ ಕಾರಣವಾಯಿತು. ಜೈನ ಕವಿಗಳು ಶರೀರ, ಮನಸ್ಸು, ಬುದ್ಧಿ ಇವುಗಳಿಗೆ ಪೋಷಕವಾಗುವ ಸಾಹಿತ್ಯವನ್ನು ನಿರ್ಮಿಸಿದರು. ಪಂಪ, ರನ್ನ, ಜನ್ನ, ನಾಗಚಂದ್ರ, ರತ್ನಾಕರವರ್ಣಿಗಳಂತಹ ಉದ್ದಾಮ ಕವಿಗಳ ಹೆಸರುಗಳು ಜೈನ ಸಾಹಿತ್ಯಕ್ಕಷ್ಟೇ ಏಕೆ? ಅಖಂಡವಾದ ಕನ್ನಡ ಸಾಹಿತ್ಯಕ್ಕೆ ಮುಕುಟಮಣಿಯಂತಿದ್ದಾರೆ,

## ವೀರಶೈವರು

ವೀರಶೈವ ಕನ್ನಡನಾಡಿನಲ್ಲಿಯೇ ಹುಟ್ಟಿ ಕನ್ನಡಿಗರ ಜೀವನೋದ್ಧಾರಕ್ಕಾಗಿ ಪಣತೊಟ್ಟು ನಿಂತ ಧರ್ಮ. ಆ ಧರ್ಮದ ಉದಯವಾದೊಡನೆ ಕನ್ನಡ ಸಾಹಿತ್ಯದ ಸ್ವರೂಪವೇ ಬೇರೆಯಾಯಿತು. ಗಾತ್ರದಲ್ಲಿಯೂ ಸತ್ವದಲ್ಲಿಯೂ ಕನ್ನಡ ಸಾಹಿತ್ಯ ಹಿರಿದಾಗುವಂತೆ ಮಾಡಿದ ಶ್ರೇಯಸ್ಸು ವೀರಶೈವ ಶರಣರಿಗೂ—ಕವಿಗಳಿಗೂ ಸಲ್ಲುತ್ತದೆ. ಅಸಂಖ್ಯಾತರಾದ ಶಿವಶರಣದಲ್ಲಿ ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವ, ಮಹಾದೇವಿಯಕ್ಕ, ಸಿದ್ಧರಾಮೇಶ್ವರ ಇವರೇ ಮೊದಲಾದವರ ಹೆಸರುಗಳು ಚಿರಸ್ಥಾಯಿಯಾಗಿವೆ. ವೀರಶೈವ ಯುಗದಲ್ಲಿ ಖ್ಯಾತಿವೆತ್ತ ಕವಿಗಳೆಂದರೆ ಹರಿಹರ, ರಾಘವಾಂಕ, ಕೆರೆಯ ಪದ್ಮರಸ, ಭೀಮಕವಿ, ಚಾಮರಸ, ನಿಜಗುಣ ಶಿವಯೋಗಿ, ವಿರೂಪಾಕ್ಷ ಪಂಡಿತ, ಷಡಕ್ಷರಿ ಮೊದಲಾದವರು.

## ಆಚಾರ್ಯತ್ರಯರು

ವೈದಿಕವು ಭಾರತದ ಪ್ರಾಚೀನ ಧರ್ಮಗಳಲ್ಲಿ ಒಂದಾಗಿದೆ. ಕರ್ನಾಟಕವು ವೈದಿಕ ಧರ್ಮದ ಶ್ರೇಯಸ್ಸಿಗೆ ಬಹುಮಟ್ಟಿಗೆ ಕಾರಣವಾಗಿದೆ. ಶಂಕರ, ರಾಮಾನುಜ, ಮಧ್ವ—ಈ ಆಚಾರ್ಯತ್ರಯವು ನಮ್ಮ ನಾಡಿನಲ್ಲಿಯೇ ಬೆಳೆದು ಬಾಳಿದರು. ಅವರ ಅದ್ವೈತ, ವಿಶಿಷ್ಟಾದ್ವೈತ, ದ್ವೈತ ತತ್ತ್ವ-ಪ್ರಸಾರಕ್ಕೆ ಕರ್ನಾಟಕವೇ ಆದಿಪೀಠ. ನಮ್ಮ ನಾಡಿನ ಮೇಲೆ ಬಂದ ನಾಸ್ತಿಕ ಮತಗಳೊಡನೆ ಹೋರಾಡಿ, ಜನತೆಯಲ್ಲಿ ಆಸ್ತಿಕ ಭಾವವನ್ನೂ ಭಕ್ತಿಯ ಸೆಲೆಯನ್ನು ಚಿಮ್ಮಿಸಿದ ಶ್ರೇಯಸ್ಸು ವೈದಿಕ ಧರ್ಮಕ್ಕಿದೆ.

ಈ ಧರ್ಮದ ಕವಿಗಳು ಕನ್ನಡದಲ್ಲಿ ಕಾವ್ಯರಚನೆ ಮಾಡಲು ಸ್ವಲ್ಪ ತಡವಾಗಿಯೇ ಆರಂಭಿಸಿದರು. ಪುರಂದರದಾಸ, ಕನಕದಾಸ, ಜಗನ್ನಾಥದಾಸ, ವಿಜಯದಾಸರಂತಹ ದಾಸವರೇಣ್ಯರ ಕೀರ್ತನೆಗಳಲ್ಲಿ ಸಮಾಜವನ್ನು ಮೇಲಕ್ಕೆತ್ತಬೇಕೆಂಬ ಪವಿತ್ರ ಭಾವನೆ ತುಂಬಿ ತುಳುಕುತ್ತಿದೆ. ಸಂಸಾರವನ್ನು ತ್ಯಜಿಸಿ, ಕೈಯಲ್ಲಿ ಒಂದು ತಂಬೂರಿಯನ್ನು ಹಿಡಿದು, ಬೀದಿ ಬೀದಿಗಳಲ್ಲಿ ಸಂಚರಿಸಿ, ಮನೆ ಮನೆಗೆ ವಿಷ್ಣುನಾಮದ ಪವಿತ್ರ ಸಂದೇಶವನು ಮುಟ್ಟಿಸಿದ ಶ್ರೇಯಸ್ಸು ಹರಿದಾಸರಿಗೆ ಸಲ್ಲುತ್ತದೆ.

ವೈದಿಕ ಪಂಥದ ಮುಖ್ಯ ಕವಿಗಳೆಂದರೆ ದುರ್ಗಸಿಂಹ, ರುದ್ರಭಟ್ಟ, ಕುಮಾರವ್ಯಾಸ, ಲಕ್ಷ್ಮೀಶ, ಮುದ್ದಣ ಮೊದಲಾದವರು. ದುರ್ಗಸಿಂಹನ ಕಥನತಂತ್ರ, ರುದ್ರಭಟ್ಟನ ಪಾಂಡಿತ್ಯ, ಕುಮಾರವ್ಯಾಸನ ಭಕ್ತಿಯವಿಲಾಸ, ಲಕ್ಷ್ಮೀಶನ ನಾದಮಾಧುರ್ಯ, ಮುದ್ದಣನ ರಸಿಕತೆ—ಇವು ಕನ್ನಡ ಸಾಹಿತ್ಯಕ್ಕೆ ಹೆಚ್ಚಿನ ಮೆರಗನ್ನು ತಂದಿವೆ.

ಹದಿನೆಂಟು-ಹತ್ತೊಂಭತ್ತನೆಯ ಶತಮಾನಗಳಲ್ಲಿ ಕನ್ನಡ ಸಾಹಿತ್ಯಕ್ಕೆ—ಒಂದು ದೃಷ್ಟಿಯಿಂದ ಸಮಸ್ತ ಭಾರತೀಯ ಸಾಹಿತ್ಯಕ್ಕೇ—ಕಗ್ಗತ್ತಲೆಯ ಕಾಲ ಬಂದಿತು. ಹತ್ತೊಂಭತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಅದು ಮತ್ತೆ ಚೇತರಿಸತೊಡಗಿತು. ಶಾಕುಂತಲ, ಚಂಡಕೌಶಿಕ ಮೊದಲಾದ ನಾಟಕಗಳನ್ನು ಕನ್ನಡಕ್ಕೆ ಪರಿವರ್ತಿಸಿದ ಅಭಿನವಕಾಳಿದಾಸ ಬಸವಪ್ಪಶಾಸ್ತ್ರಿ, ರಾಮಾಶ್ವಮೇಧ ಮತ್ತು ಅದ್ಭುತರಾಮಾಯಣಗಳನ್ನು ಬರೆದ ನಂದಳಿಕೆ ಲಕ್ಷ್ಮೀನಾರಣಪ್ಪ, ಮುದ್ರಾಮಂಜೂಷವನ್ನು ಬರೆದ ಕೆಂಪುನಾರಾಯಣ—ಈ ಕವಿಗಳ ಕಾಲದಲ್ಲಿ ಸಂಸ್ಕೃತ ಸಾಹಿತ್ಯದ ಪ್ರಭಾವದಿಂದ ಮತ್ತೆ ಕನ್ನಡವು ಜಾಗ್ರತವಾಯಿತು. ಕ್ಷಿಪ್ರದಲ್ಲಿಯೇ ಆಂಗ್ಲ ವಾಙ್ಮಯದ ಪ್ರಭಾವವೂ ಕನ್ನಡಿಗರ ಮೇಲೆ ಆಯಿತು. ತತ್ಪರಿಣಾಮವಾಗಿ ಭಾವಗೀತೆ, ಸಣ್ಣಕತೆ, ನಾಟಕ, ಕಾದಂಬರಿ, ಹರಟೆ, ಪ್ರಬಂಧ ಮೊದಲಾದ ನೂತನ ಪ್ರಕಾರಗಳು ಕನ್ನಡ ಸಾಹಿತ್ಯದಲ್ಲಿ ಉದಯವಾದುವು.

(ಸಶೇಷ)

---

**ಪಂಚಾಯತ್ ರಾಜ್ಯ ಸಮ್ಮೇಳನ:** ಮಂಗಳೂರು, ಪುತ್ತೂರು, ಬೆಳ್ತಂಗಡಿ ಮತ್ತು ಬಂಟ್ವಾಳ ಈ ನಾಲ್ಕು ತಾಲೂಕುಗಳ ಪಂಚಾಯ್ತು ಮತ್ತು ತಾಲೂಕು ಬೋರ್ಡ್ ಸಮ್ಮೇಳನವು ತಾ. 26ರಂದು ಬೆಳಗ್ಗೆ ದ. ಕ. ಜಿಲ್ಲಾಧಿಕಾರಿ ಶ್ರೀ| ಸಿ. ಜೆ. ಪದ್ಮನಾಭನವರಿಂದ ಉದ್ಘಾಟಿಸಲ್ಪಟ್ಟಿತು. ಕಾರ್ಕಳ ತಾಲೂಕು ಬೋರ್ಡಿನ ಅಧ್ಯಕ್ಷ ಡಾ| ಎಸ್. ಮೋಹನದಾಸ ಅಡ್ಯಂತಾಯರು ಅಧ್ಯಕ್ಷತೆವಹಿಸಿದ್ದರು. ಸಭಾರಂಭದಲ್ಲಿ ಮಂಗಳೂರು ತಾಲೂಕು ಬೋರ್ಡ್ ಅಧ್ಯಕ್ಷ ಶ್ರೀ| ಬಿ. ರಾಜೀವ ಭಂಡಾರಿಯವರು ಸ್ವಾಗತಿಸಿ, ಕೊನೆಯಲ್ಲಿ ಉಪಾಧ್ಯಕ್ಷ ಶ್ರೀ| ಬಿ ಎಂ. ಇದಿನಬ್ಬನವರು ವಂದನೆಗಳನ್ನರ್ಪಿಸಿದರು.

---


41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ

**ದಿ ಪಾಂಗಾಳ ನಾಯಕ್ ಬೇಂಕ್ ಲಿ.,**

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ.
ಬಡ್ಡಿ ಶೇಕಡಾ 5ರಂತೆ. ರೂ. 87-00 3 ವರ್ಷಗಳ ಅಂತ್ಯದಲ್ಲಿ
ಬಡ್ಡಿ ಕೂಡಿ ರೂ. 100-00 ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು:
ಬಡ್ಡಿ ಸೇಕಡಾ 5¼ರ ವರೆಗೆ.

ತಾ.1-4-1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

**The Pangal Nayak Bank, Limited**
ESTD: 1920.

ಯನ್ನು ಮುಟ್ಟಿಸುವಂತೆ ಮಾಡಿದ್ದು, ಮಡಿವಾಳನು ತಂದ ಸುವಾರ್ತೆ—ಇವನ್ನೆಲ್ಲ ಕಾಡ್ಯರಿಗೆ ವರದಿ ಮಾಡಿದನು.

ಉಮ್ಮಣ ಅತ್ತಿಯು ಮರಣಕ್ಕೆ ಆಗ ಮಿಸಿದನು. ಚೀಂಪು ಬೈದ್ಯೆದಿಯ ಶವ ಸಂಸ್ಕಾರವನ್ನು ಕಾಡ್ಯರೊಡಗೂಡಿ ಎಲ್ಲರೂ ಕ್ರಮದಂತೆ ನೆರವೇರಿಸಿದರು. ಅಶನದ ಗದ್ದೆಯಲ್ಲಿ ಊರಿದ ಮುಸಣದ ಕಾಷ್ಠದಲ್ಲಿ ಚೀಂಪು ಬೈದ್ಯೆದಿಯ ನಶ್ವರ ದೇಹವು ಧಗಧಗಿಸಿತು.

ಸೀತು ಬಾಲೆ ರಜಸ್ವಲೆಯಾಗಿ ಏಳು ದಿವಸಗಳು ಕಳೆಯಲು ಅವಳಿಗೆ ಗಂಡನ ಮನೆಯಲ್ಲಿ "ಕರ ಪತ್ತಯರ್"(ಕುಂಭಾಭಿಷೇಕ ವಿಧಿಯನ್ನು ಜರಗಿಸಿದರು). ಅಣ್ಣಂದಿಯರು ತಂಗಿಯನ್ನು ಗಂಡನ ಮನೆಯಿಂದ ತಮ್ಮ ಕೋಡಿ ಕೊಂತಳಂದದ ಬೀಡಿಗೆ ಕರಕೊಂಡು ಬಂದರು.

ಸೀತು ಬಾಲೆ ದಂಡಿಗೆಯಲ್ಲಿ ಕುಳಿತುಕೊಂಡು ಕಂಬಳದ ಕಟ್ಟಹುಣಿಯಲ್ಲಿ ಬರುತ್ತಿದ್ದಾಗ, ಗದ್ದೆಯಲ್ಲಿ ತಾಯಿಯನ್ನು ದಹನಮಾಡಿದ ಚಿತಾಭಸ್ಮದ ರಾಶಿಯಿಂದ ಹೊಗೆಯು ಹೊರಹೊಮ್ಮುತ್ತಿರುವುದು ಅವಳಿಗೆ ಕಾಣಿಸಿತು. ಕುತೂಹಲಜನಿತಳಾಗಿ ಸನಿಹದಲ್ಲಿ ನಡೆದುಕೊಂಡು ಬರುತ್ತಿರುವ ತನ್ನ ಅಣ್ಣಂದಿಯರಿಗೆ ಪ್ರಶ್ನಿಸಿದಳು:

"ಅಣ್ಣಂದಿಯರೇ, ಅದೇನು? ಬೂದಿಯ ರಾಶಿಯಿಂದ ಬೆಂಕಿಯ ಹೊಗೆ ಏಳುತ್ತಿದೆಯಲ್ಲಾ! ಏನದು?"

ಅದು ಕೊಳಕೆಯ ಗದ್ದೆಗೆ "ಸೂಟಾಸ್" (ಸುಡು ಮಣ್ಣಿನ ಗೊಬ್ಬರ) ಇಟ್ಟದ್ದು, ಮಗಳೇ.

ಅಣ್ಣಂದಿಯರು ಹಾರಿಕೆಯ ಉತ್ತರವನ್ನಿತ್ತರು.

ಸೀತು ಆನೆಬಾಗಿಲಲ್ಲಿ ದಂಡಿಗೆಯಿಂದ ಇಳಿದವಳೇ ಬೀಡಿನ ಚಾವಡಿಗೆ ಓಡುತ್ತ ಬಂದಳು. ಅವಳಿಗೆ ತನ್ನ ಪ್ರೀತಿಯ ತಾಯಿಯನ್ನು ಕಾಣುವ ಆತ್ಯಾತುರ!

"ತಾಯಿ! ತಾಯಿ! ಎಲ್ಲಿದ್ದೀರಿ ನೀವು—ತಾಯಿ? ನಿಮ್ಮನ್ನು ನೋಡದೆ ನನ್ನ ಕಣ್ಣುಗಳು ಚಡಪಡಿಸುತ್ತವೆ. ತೆಕ್ಕಾಡದೆ ಕೈಗಳು ಬಚ್ಚಿಹೋಗಿವೆ. ಎಲ್ಲಿದ್ದೀರಿ, ತಾಯಿ?"

ತಂಗಿ ಕೊಠಡಿಯಿಂದ ಕೊಠಡಿಗೆ ಅರಸುತ್ತ ಅಲೆಯುವುದನ್ನು ನೋಡುತ್ತ, ಅಣ್ಣಂದಿಯರು ಕರಕರಿಯ ಧ್ವನಿಯಿಂದ ಅವಳಿಗೆ ಅಂದರು:

"ತಂಗೀ, ತಾಯಿಯವರು ಕೊಂಚ ಅಸೌಖ್ಯಪಟ್ಟುಕೊಂಡು ಬಡಗು ಸಿರಿ ಚಾವಡಿಯ ಮಗ್ಗಲ ಕೊಠಡಿಯಲ್ಲಿ ಮಲಗಿದ್ದಾರೆ."

ಆ ಸಮಯದಲ್ಲಿ ಹಿರಿಯ ಅಣ್ಣನು ಪ್ರಸಂಗಾವಧಾನತೆಯಿಂದ ಒಂದು ಯುಕ್ತಿಯನ್ನು ಸೃಜಿಸಿದ್ದನು. ಮೃದು ಸ್ವಭಾವೆಯಾದ ಬಾಲಭಾವದ ಮುದ್ದಿನ ತಂಗಿಗೆ, ತಾಯಿ ಅಕಾಲ ಮರಣಕ್ಕೆ ಈಡಾದಳೆಂಬ ಕರಾಳ ವಾರ್ತೆ ಒಮ್ಮೆಲೇ ಇಷ್ಟಕ್ಕಿದ್ದ ಹಾಗೆ ಗೊತ್ತಾಗಿಬಿಟ್ಟರೆ ಅನರ್ಥವಾದೀತು—ಅವಳಿಗೆ ಆ ದುಃಖದ ಪ್ರಸಂಗವನ್ನು ಸಹನೆಮಾಡಲಸಮರ್ಥವಾಗಬಹುದು—ಮುಖ್ಯತಃ ಅವಳ ಪ್ರಾಣಕ್ಕೇ ಅಪಮೋಸ ತಟ್ಟೀತು—ಹೀಗೆಂದುಕೊಂಡು ಹಿರಿಯಣ್ಣನು ತರ್ಕಿಸಿದನು. ತಂಗಿಯನ್ನು ಅಪಾಯಪಡಿಸುವುದರಿಂದ ತಪ್ಪಿಸುವುದಕ್ಕಾಗಿ ಆತನು ತಾಯಿಯು ಮಲಗಿದ್ದ ಕೊಠಡಿಯಲ್ಲಿ ಮೈಗೆ ಪೂರ್ತ ವಸ್ತ್ರವನ್ನು ಹೊದೆದುಕೊಂಡು ಹಾಸಿಗೆಯಲ್ಲಿ ಶಯನಿಸಿದನು.

ಸೀತು ಬಾಲೆ ತಾಯಿಯ ಕೊಠಡಿಗೆ ಹೊಕ್ಕಿದಳು. ತನ್ನ ತಾಯಿಯೇ ಎಂದು ಭಾವಿಸಿ ಮುಂಡಿಯೂರಿ ಅನುಕಂಪವನ್ನು ಹೊರಸೂಸುತ್ತ ಮಲಗಿದ್ದ ಅಣ್ಣನನ್ನು ಅಪ್ಪಿದಳು.

ಒಮ್ಮೆಲೇ ಬೆಚ್ಚಿ ಬೆರಗಾಗಿ ಬಿಟ್ಟಳು, ದುಂಡಗಾದೊಂದು ಕಲ್ಲನ್ನು ತಾನು ಅಪ್ಪಿದಂತೆ ಅವಳಿಗೆ ಸ್ಪರ್ಶನವಾಯಿತು. ಮನದಲ್ಲಿ ತಲ್ಲಣವನ್ನು ಪಟ್ಟು ತಟ್ಟನೇ ಮೋರೆಗೆ ಹೊದೆದಿದ್ದ ವಸ್ತ್ರವನ್ನು ಈಚೆಗೆ ಸೆಳೆದು ದಿಟ್ಟಿಸಿದಳು. ದೊಡ್ಡಣ್ಣನು:

"ಅಯ್ಯೋ ಅಣ್ಣಾ! ಇದೇಕೆ ಹೀಗೆ ಇಲ್ಲಿ ಬಿದ್ದಿರುವಿರಿ? ನನ್ನ ತಾಯಮ್ಮ ಎಲ್ಲಿದ್ದಾರೆ? ಮನೆಯು ಮುಸಣವಾದಂತೆ ತೋರುತ್ತಿದೆಯಲ್ಲಾ? ಹಾ! ಏನು ಸಂಗತಿ? ಏನು ಹಾಸ್ಯವಿದು? ಏನು ಕತೆ, ಅಣ್ಣಾ? ನನ್ನ ತಾಯಿ? ನನ್ನ ತಾಯಿ ಎಲ್ಲಿ, ಅಣ್ಣಾ?"

ಅಣ್ಣನು ಎದ್ದು ಕೂತುಕೊಂಡನು. ತಂಗಿಯನ್ನು ತಕ್ಕೈಸಿ ತನ್ನ ಎದೆಗೆ ಅವಚಿಕೊಂಡನು.

"ಮಗಳೇ, ನಿನ್ನ ಅಣ್ಣಂದಿಯರಾದ ನಾವು ಇದಕ್ಕಾಗಿಯೇ ತಂಗಿ ಎಂಬವಳೊಬ್ಬಳು ನಮಗೆ ಬೇಕೆಂದು ದೇವರಿಗೆ ಹೇಳಿಕೊಂಡೆವು. ತಂಗೀ! ಹಾ! ತಂಗಿ ಎನ್ನುವ ಸೊಲ್ಲು ಅದೆಷ್ಟು ಮಧುರ! ಎಷ್ಟು ಪವಿತ್ರ! ಕುಟುಂಬದ ಐಸಿರಿ ನೀನು! ವಂಶದ ಮರ, ಸಂತಾನದ ಸುಮ! ಅಂತ್ಯಕಾಲದ ತಾಯಿಯ ವಿಯೋಗಾನಂತರದಲ್ಲಿ ತಾಯಿಯಂತೆ ಪರ್ಕಿಸುವ ಮಮತಾಮಯಿಯೊಬ್ಬಳು ನಮಗೆ ಬೇಕೆಂತಲೇ ನಿನ್ನನ್ನು ನಾವು ಪಡೆದೆವು, ತಂಗೀ ಸೈರಿಸು! ಮನಸ್ಸನ್ನು ಕೊಂಚ ಕಲ್ಲು ಮಾಡು ತಾಯೀ. ನಮ್ಮ ಹೆತ್ತಬ್ಬೆಗೆ ಬಂದ ಆ ಲೋಕದ ಕರೆಯನ್ನು ನಿನಗೆ ನಾನು ಹೇಳಬೇಕಾಗಿದೆ."

ಸೀತು ಬಾಲೆ ತನ್ನ ಅಣ್ಣನ ಎದೆಗೆ ಒರಗಿಕೊಂಡು ಭಯಾತುರ ತುಂಬಿದ ಕಂಗಳಿಂದ ಆತನ ಮೊಗದ ಕಡೆಗೆ ಈಕ್ಷಿಸುತ್ತಿದ್ದಳು. ತಾಯಿ ದೈವಾಧೀನಳಾಗಿ ಹೋದ ಈ ವರೆಗೆ ಬಚ್ಚಿಟ್ಟ ರಹಸ್ಯವನ್ನು ಮತ್ತೆ ತಡಮಾಡದೆ ಅಣ್ಣನು ಅವಳಿಗೆ ಉಸುರಿದನು.

"ಅಯ್ಯೋ! ನನಗರಿಯದ ಹಾಗೆ ನನ್ನ ತಾಯಿಯನ್ನು ಕಾಷ್ಠಕ್ಕೆ ಒಗೆದು ಸುಟ್ಟುಬಿಟ್ಟಿರಾ? ನಾನೂ ಹೋಗುತ್ತೇನೆ. ನನ್ನ ತಾಯಿಯೊಂದಿಗೆ ನಾನೂ ಹೋಗುತ್ತೇನೆ. ನನ್ನನ್ನು ಕೂಡ ಒಗೆದು ತಾಯಿಯ ಕಾಷ್ಠದಲ್ಲೇ ಸುಟ್ಟುಬಿಡಿರಿ. ಹಾ! ನಾನು ತಾಯಿಯನ್ನು ಕಳೆದುಕೊಂಡು ಒಂದು ಕ್ಷಣವೂ ಬದುಕಲಾರೆ ....ತಾಯಿ! ತಾಯಿ!...."

ಹೀಗೆಂದು ದೊಡ್ಡ ರೋಧನ ಧ್ವನಿಯನ್ನು ಮಾಡುತ್ತ ಸೀತು ಬಾಲೆ ಅಣ್ಣನ ಕೈಯಿಂದ ಪಾರಾಗಿ ಹೊರಗೆ ಓಡಲು ಸೆಣಸಾಡಿದಳು. ಇತರ ಅಣ್ಣಂದಿಯರೂ ಬಂದು ಅಲ್ಲಿ ಸೇರಿದರು. ತಂಗಿಯನ್ನು ಅಡ್ಡವಿಸಿ ಎಲ್ಲರೂ ನಾನಾ ಪರಿಯಿಂದ ಸಮಜಾಯಿಸಿದರು.

ಬಹಳ ಹೊತ್ತಿನ ತನಕ ಅವಳ ಆರ್ತನಾದವು ನಿಲುಗಡೆ ಇಲ್ಲದೆ ಒಂದೇ ಪ್ರಕಾರವಾಗಿ ಸಾಗಿಕೊಂಡಿತು. ಕೊನೆಗೆ ಹಿರಿಯಣ್ಣನು ಗಂಭೀರವಾಗಿ ಪರಿಣಾಮವನ್ನು ಬೀರುವ ಹಾಗೆ ಈ ರೀತಿಯ ಸಮಾಧಾನೋಕ್ತಿಯನ್ನು ಅವಳಿಗೆ ಆಡಿದನು:

"ಮಗಳೇ, ನರನಂತೆ ನರನಿಲ್ಲ. ಮರದಂತೆ ಮರವಿಲ್ಲ. ಈವತ್ತು ಇದ್ದವನು ನಾಳೆಯಿಲ್ಲ. ನಮ್ಮ ಜೀವ ಶಾಶ್ವತವಲ್ಲ. ಆದರೆ ಈ ಅಸ್ಥಿರ ಜೀವನದಲ್ಲಿ ನೀನು ನಮಗೆ ಚೇತನಕಾರಕಳಿರುತ್ತಿ. ತಂಗೀ, ಮಾಯಾ ಮಮತೆ ಎಂಬುದು ನಮ್ಮನ್ನು ನಿನಗೆ ವಿಕ್ರಯಿಸಿಕೊಂಡಿದೆ. ನಿನಗಾಗಿ ನಮ್ಮ ಬದುಕು! ನಿನಗಾಗಿ ನಮ್ಮ ಜೀವನ ಮುಡಿಪು! ಮಗಳೇ, ನಾವು ನಿನ್ನ ಏಳು ಮಂದಿ ಅಣ್ಣಂದಿಯರು ನಿನ್ನನ್ನು ಅನುನಿತ್ಯ ಆದರಿಸಿಕೊಂಡು ನಡೆಯುವೆವು. ಚಿಂತೆ ಬಿಡು, ದುಃಖ ತೊರೆ. ನಿನ್ನನ್ನು ನಾವು ಎಂದೂ ಬಿಟ್ಟುಹಾಕುವುದಿಲ್ಲ."

ಮೃತಳ ದಹನಕ್ರಿಯೆಯ ತರುವಾಯದ ಮೂರನೇ ದಿನದಲ್ಲಿ ಜರಗತಕ್ಕ "ಬೂದಿ ಒಪ್ಪ" (ಚಿತಾಭಸ್ಮವಿಸರ್ಜನಾ ವಿಧಿ)ವನ್ನು ಕಾಡ್ಯರು ಮಾಡಿರಲಿಲ್ಲ. ತಂಗಿ ತವರಿಗೆ ಬಂದ ಮೇಲೆಯೇ ಅದನ್ನು ಮಾಡಿದರು. ತಾಯಿಯ "ಸಾವು ಸೊಲೆ" (ಅಂತ್ಯೇಷ್ಟಿ ಕರ್ಮ)ಯನ್ನು ಕಾಡ್ಯರು ಬಹು ಗಡುದಿನಿಂದ ಜರಗಿಸಿದರು. ಬಲ್ಲಿದ ಬಡವರಾದ ಎಲ್ಲವರೂ ಸಮಾರಾಧನೆಯಲ್ಲಿ ಪಾಲುಗೊಂಡರು. ಜನರು ಚೀಂಪು ಬೈದ್ಯೆದಿಯ ಆತ್ಮಕ್ಕೆ ಸದ್ಗತಿಯನ್ನು ಕೋರಿದರು. ಸಪ್ತ ಕಾಡ್ಯಾದಿಗಳನ್ನು ಕೊಂಡಾಡಿ ಹರಸಿದರು.

—ಎಮ್. ನಾರಾಯಣ,
ಮಂಗಳೂರು.

—


ಒಂದಾಣೆ ಮಾಲೆಯಲ್ಲಿ
90ಕ್ಕಿಂತಲೂ ಹೆಚ್ಚು
ಏಕಾಂಕ ನಾಟಕಗಳು
ಪ್ರಕಟವಾಗಿವೆ.

●

ಪ್ರತಿಯೊಂದೂ, ಅಭಿನಯಿಸಲು ಯೋಗ್ಯವಾಗಿವೆ.
ಪ್ರತಿಯೊಂದಕ್ಕೂ ಒಂದಾಣೆ.

●

ಒಂದಾಣೆ ಮಾಲೆ
ಪ್ರಭಾತ ಆಫೀಸು,
ರಥಬೀದಿ :: ಮಂಗಳೂರು.



VALUE AND SERVICE
Have won the Sovereign Tiles and Terracotta their unparalleled reputation.
Their buyers are their patrons, and that patronage has been won by long and economic service.
Sovereign Tile Works,
Boloor, Mangalore.



ಸ್ಥಾಪಿತ: 1939. ಟೆಲಿಫೋನ್ ನಂಬ್ರ: 432.

ದಿ ಮಂಗಳೂರು ಸಿಟಿ ಬೇಂಕ್
ಪೆಂಟ್ಲೆಂಡ್ ಪೇಟೆ — ಮಂಗಳೂರು.

ನಿರಖು ಠೇವಣಾತಿಗಳು: ಆರು ತಿಂಗಳಿಗೊಮ್ಮೆ, ಸಾ। ಸೇಕಡಾ 5% ವರೆಗೆ ಬಡ್ಡಿ ಕೊಡಲ್ಪಡುವುದು. (ರೂ.2,000/-ಮತ್ತು ಹೆಚ್ಚಿನ ಮೊಬಲಗುಗಳಿಗೆ ¼% ಅಧಿಕ ಬಡ್ಡಿ)

ಚಾಲತಿ, ಸೇವಿಂಗ್ಸ್ ಬೇಂಕ್: ಖಾತೆಗಳನ್ನು ತೆರೆಯಲಾಗುವುದು. ತೃಪ್ತಿಕರ ಬಡ್ಡಿ ದರಗಳು. (ಬಡ್ಡಿ ದರಗಳು ಮುಂದಾಗಿ ತಿಳಿಸದೆನೇ ಬದಲಾಯಿಸಲ್ಪಡಬಹುದು.)

ಹುಂಡಿಗಳು ವಟಾಯಿಸಲ್ಪಡುವುವು; ಅನುಮೋದಿಸಲ್ಪಟ್ಟ ಭದ್ರತೆಗಳ ಮೇಲೆ ಯೋಗ್ಯ ಬಡ್ಡಿಯಲ್ಲಿ ಸಾಲಗಳೂ ಓವರ್‌ಡ್ರಾಫ್ಟುಗಳೂ ಕೊಡಲ್ಪಡುವುವು. ಬೇಂಕಿಂಗ್ ವಹಿವಾಟುಗಳೆಲ್ಲ ನಡೆಸಲ್ಪಡುವುವು. ಹೆಚ್ಚಿನ ಮಾಹಿತಿಗೆ ಆಫೀಸಿಗೆ ಬರೆಯಿರಿ.

ಆರ್. ಎಮ್. ಕಿಣಿ, ಬಿ.ಎ.,
ಪ್ರೊಪ್ರೈಟರ್.



ಒಂದು ಹೊಸ ಪ್ರಕಟಣೆ!

ತುಳು ಒಗಟುಗಳು

ಚತುರೋಕ್ತಿಗಳಲ್ಲೂ ತುಳು ಭಾಷೆಯು ಸಿರಿವಂತ ಭಾಷೆಯೇ ಆಗಿದೆ. ತುಳು ಭಾಷೆಯಲ್ಲಿ ಪ್ರಚಾರದಲ್ಲಿರುವ ಕೆಲವು ಒಗಟುಗಳನ್ನು ಸಂಗ್ರಹಿಸಿ, ಶ್ರೀ। ಎಂ. ನಾರಾಯಣನವರು, ಅವುಗಳ ಕನ್ನಡ ತರ್ಜುಮೆ ಸಹಿತ ಕಳುಹಿಸಿರುವರು. ಈ ಒಗಟುಗಳನ್ನು ಪುಸ್ತಕ ರೂಪವಾಗಿ ಪ್ರಕಟಿಸಲಾಗುವುದು.

ಬಿಡಿ ಪ್ರತಿಗೆ 25 ನಯೆ ಪೈಸೆ.

ಟಪ್ಪಾಲಲ್ಲಿ ಬಿಡಿ ಪ್ರತಿ ತರಿಸುವವರು 35 ನಯೆ ಪೈಸೆ ಅಂಚೆಚೀಟನ್ನು ಕಳಿಸಬಹುದು. ವಿ. ಪಿ. ಕಳಿಸಲ್ಪಡುವುದಿಲ್ಲ.

ಹಣವನ್ನು—
ಮೆನೇಜರ್— ಪ್ರಭಾತ,
ರಥಬೀದಿ, ಮಂಗಳೂರು-೧.
—ಇವರಿಗೆ ಕಳುಹಿಸತಕ್ಕದ್ದು.

